# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 283(455) |
| ಮಾನ್ಯ ಸದಸ್ಯರ ಹೆಸರು: | ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು: | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |
| ಉತ್ತರಿಸಬೇಕಾದ ದಿನಾಂಕ: | 10.03.2025. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಶಿಕ್ಷಣದ ಸ್ಥಿತಿಗತಿ ಕುರಿತು ವಾರ್ಷಿಕ ವರದಿ (ಎಎಸ್‌ಇಆರ್)-2024ರಲ್ಲಿ ಮೂರನೇ ತರಗತಿಯ ಶೇಕಡ 7.1ರಷ್ಟು ಮಕ್ಕಳು ಅಕ್ಷರಗಳನ್ನು ಓದುವ ಸಾಮರ್ಥ್ಯ ಹೊಂದಿಲ್ಲದಿರುವುದು ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿ ಗಣಿತದಲ್ಲಿ ಕೌಶಲ ಹೊಂದಿರುವ ಮಕ್ಕಳ ಪ್ರಮಾಣ ಕಡಿಮೆ ಇರುವ ಬಗ್ಗೆ ವರದಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಹೌದು |
| ಆ) | ಬಂದಿದ್ದಲ್ಲಿ ಮಕ್ಕಳ ಕಲಿಕಾಮಟ್ಟ ಸುಧಾರಣೆಗಾಗಿ ಹಾಗೂ ಪರಿಣಾಮಕಾರಿ ಕಲಿಕೆಗಾಗಿ ಸರ್ಕಾರ ಕೈಗೊಳ್ಳಬಹುದಾದ ಕ್ರಮಗಳೇನು: | ಕಲಿಕೆಯಲ್ಲಿ ಹಿಂದುಳಿದಿರುವ ಮಕ್ಕಳ ಕಲಿಕೆಯನ್ನು ಉತ್ತಮಪಡಿಸಲು ಇಲಾಖೆಯಿಂದ ಕೈಗೊಂಡಿರುವ ಮತ್ತು ಮುಂದಿನ ದಿನಗಳಲ್ಲಿ ಕೈಗೊಳ್ಳುವ ಕ್ರಮಗಳು ಈ ಕೆಳಗಿನಂತಿವೆ:<br>1. ವಿದ್ಯಾರ್ಥಿಗಳಲ್ಲಿ ಭಾಷೆ ಮತ್ತು ಗಣಿತದ ಮೂಲಭೂತ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು Fundamental Literacy &Numeracy (FLN) ಎಂಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.<br>2. 4 ಮತ್ತು 5ನೇತರಗತಿಯ ವಿದ್ಯಾರ್ಥಿಗಳಿಗೆ ಬುನಾದಿ ಭಾಷಾ ಮತ್ತು ಗಣಿತ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು “ಕಲಿಕಾ ಮಟ್ಟಕ್ಕೆ ಅನುಗುಣವಾಗಿ ಬೋಧನೆ” ಎಂಬ ಬೋಧನಾ |

| | | |
|---|---|---|
| | | ವಿಧಾನವನ್ನು ಬಳಸಿಕೊಂಡು ಸರಳ ಮೌಲ್ಯ ಮಾಪನದ ಮೂಲಕ ಮಕ್ಕಳ ಕಲಿಕಾ ಮಟ್ಟ ಗುರುತಿಸಿಕೊಂಡು ಕಲಿಕಾ ಮಟ್ಟಕ್ಕೆ ಅನುಗುಣವಾಗಿ ಮಕ್ಕಳ ಗುಂಪುಗಳನ್ನು ಮಾಡಿ ಸೂಕ್ತ ಕಲಿಕಾ ಸಾಮಗ್ರಿಗಳನ್ನು ನೀಡಿ ಚಟುವಟಿಕೆಗಳನ್ನು ನಡೆಸಿ ಕಲಿಸಲು ಕ್ರಮ ಕೈಗೊಳ್ಳಲಾಗುವುದು.<br>3. ನಿಪುಣ್ ಭಾರತ್ ಅಡಿಯಲ್ಲಿ ಮಾರ್ಪಾಡು ಮಾಡಿರುವ FLNನ 17 ಕಲಿಕಾ ಫಲಗಳ ಬಗ್ಗೆ ಕಾರ್ಯಾಗಾರದಲ್ಲಿ ಮಾರ್ಗದರ್ಶನ ನೀಡಿ ಜಿಲ್ಲಾ ಅನುಷ್ಠಾನ ಅಧಿಕಾರಿಗಳ ಮೂಲಕ ಶಾಲೆಗಳಲ್ಲಿ ಪರಿಣಾಮಕಾರಿಯಾಗಿ FLN ಕಲಿಕಾ ಫಲಗಳನ್ನು ಅನುಷ್ಠಾನ ಮಾಡುವುದು ಹಾಗೂ ಅನುಪಾಲನೆ ಮಾಡುವುದು.<br>4. ಜುಲೈ 2025ರ ಮಾಹೆಯಿಂದ ಸರ್ಕಾರಿ ಶಾಲೆಗಳ 4 ಮತ್ತು 5ನೇ ತರಗತಿಯ ಶಿಕ್ಷಕರಿಗೆ ತರಬೇತಿಯನ್ನು ನೀಡಿ ಶಾಲಾ ವೇಳೆಯಲ್ಲಿ ಪೂರಕ ಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ವಿದ್ಯಾರ್ಥಿಗಳ ಕಲಿಕೆ ಮಟ್ಟವನ್ನು (ಅಕ್ಷರ, ಪದ, ವಾಕ್ಯಗಳನ್ನು ನಿರರ್ಗಳವಾಗಿ ಓದುವ) ಉತ್ತಮಗೊಳಿಸಲು ಕ್ರಮ ವಹಿಸಲಾಗುವುದು.<br>5. ಮಕ್ಕಳ ಪ್ರಗತಿಸಾಧನೆಯನ್ನು ಪ್ರತಿ ತಿಂಗಳು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳ (ಡಯಟ್) ಮೂಲಕ ಪಡೆದು ಪರಿಶೀಲಿಸಿ ಮುಂದಿನ ತಿಂಗಳಲ್ಲಿ FLN ಸಾಧಿಸದ ಮಕ್ಕಳಿಗೆ ಕೈಗೊಳ್ಳ ಬೇಕಾದ ಕ್ರಮಗಳ ಬಗ್ಗೆ ಡಯಟ್‌ನ ನೋಡಲ್ ಅಧಿಕಾರಿಗಳಿಗೆ ಮಾರ್ಗದರ್ಶನ ನೀಡುವುದು.<br>6. FLN ಸಾಧನೆ ಮಾಡಿದ ಶಾಲೆಗಳು, ಕ್ಲಸ್ಟರ್‌ಗಳು ಮತ್ತು ಬ್ಲಾಕ್‌ಗಳನ್ನು ಗುರುತಿಸಿ ಉತ್ತೇಜಿಸುವುದು.<br>7. ಕಲಿಕಾ ಹಬ್ಬ, ಮೆಟ್ರಿಕ್ ಮೇಳ, FLN ಪೂರ್ಣ ಪ್ರಮಾಣದಲ್ಲಿ ಜಾರಿಗೆ ತರುವುದು ಸ್ಪರ್ಧೆಗಳನ್ನು |

| | | |
|---|---|---|
| | | ಏರ್ಪಡಿಸುವುದು, ವಿದ್ಯಾ ಪ್ರವೇಶವನ್ನು ವ್ಯವಸ್ಥಿತವಾಗಿ ಜಾರಿಗೆ ತರುವುದು. ಮಾಸಾಚರಣೆಗಳನ್ನು ವ್ಯವಸ್ಥಿತವಾಗಿ ಜಾರಿಗೆ ತರುವುದು. ಈ ಎಲ್ಲಾ ಅಂಶಗಳ ಕುರಿತು 2025-26ರ ಶೈಕ್ಷಣಿಕ ಮಾರ್ಗದರ್ಶಿಯಲ್ಲಿ ಈ ಬಗ್ಗೆ ವಿವರವಾದ ಮಾಹಿತಿ ನೀಡುವುದು, ನಿಯಮಿತ ಅನುಪಾಲನೆಗೆ ಕ್ರಮ ವಹಿಸುವುದು.<br>8. ಓದು ಕರ್ನಾಟಕ ಕಾರ್ಯಕ್ರಮದಡಿ ರಾಜ್ಯದ 42 ಸಾವಿರ ಶಿಕ್ಷಕರಿಗೆ ತರಬೇತಿ ನೀಡಿ ಪ್ರತಿದಿನ ಭಾಷಾ ಮತ್ತು ಗಣಿತ ಕಲಿಕೆಗೆ ತಲಾ 1 ಅವಧಿಯನ್ನು ನಿಗದಿಪಡಿಸಿ 60 ದಿನಗಳ ಕಾಲ ಶಾಲಾ ವೇಳೆಯಲ್ಲಿ ಅನುಷ್ಠಾನಗೊಳಿಸಲಾಗುವುದು.<br>9. ಕಾರ್ಯಕ್ರಮದ ಪ್ರಾರಂಭದಲ್ಲಿ Base line ಸಮೀಕ್ಷೆ ನಡೆಸಿ ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ಗುರುತಿಸಿಕೊಂಡು 60 ದಿನಗಳ ನಂತರ Endline ಸಮೀಕ್ಷೆ ನಡೆಸಿ ವಿದ್ಯಾರ್ಥಿಗಳ ಕಲಿಕೆಯಲ್ಲಿ ಉಂಟಾಗಿರುವ ಪ್ರಗತಿಯನ್ನು ತಂತ್ರಜ್ಞಾನವನ್ನು ಬಳಸಿ ವಿಶ್ಲೇಷಿಸಲಾಗುವುದು.<br>10. ಗಣಿತ ಗಣಕ:- ಈ ವಿನೂತನ ಕಾರ್ಯಕ್ರಮವನ್ನು ಮುಂದಿನ ಶೈಕ್ಷಣಿಕ ಸಾಲಿನಲ್ಲಿಯೂ ಮುಂದುವರೆಸಲು ಉದ್ದೇಶಿಸಲಾಗಿದೆ.<br>11. 2025-26ನೇ ಸಾಲಿಗೆ PAB ಚಟುವಟಿಕೆಗಳಡಿ 6 ರಿಂದ 8ನೇ ತರಗತಿ ಬೋಧಿಸುವ ಶಿಕ್ಷಕರಿಗೆ ತರಬೇತಿ ನೀಡಲಾಗುವುದು.<br>12. 2025-26ನೇ ಸಾಲಿನಲ್ಲಿ ಗಣಿತ ಕಲಿಕಾ ಆಂದೋಲನಾ ಕಿಟ್-2.0 ಬಳಕೆಯನ್ನು ಜಿಲ್ಲಾ ಮತ್ತು ಕ್ಷೇತ್ರ ಮಟ್ಟದ ಅನುಪಾಲನಾ ಅಧಿಕಾರಿಗಳಿಂದ ಅನುಪಾಲನೆ ಮಾಡಲಾಗುವುದು.<br>13. 2024-25ನೇ ಸಾಲಿನಲ್ಲಿ 6ನೇ ತರಗತಿಯಲ್ಲಿ ಆಂಗ್ಲ ಮಾಧ್ಯಮ ತರಗತಿಗಳು ನಡೆಯುತ್ತಿರುವ 1001 ಶಾಲೆಗಳಲ್ಲಿ 2025-26ನೇ ಸಾಲಿನಲ್ಲಿ 7ನೇ |

| | | |
|---|---|---|
| | | ತರಗತಿಯಲ್ಲಿ ಆಂಗ್ಲ ಮಾಧ್ಯಮ ಪ್ರಾರಂಭಿಸಲಾಗುವುದು.<br>14. ಆಲೂರು ವೆಂಕಟರಾವ್ ಭಾಷಾ ಕೌಶಲ್ಯ ಕೇಂದ್ರಗಳ ಮೂಲಕ ಕಥೆಗಳ ಮೂಲಕ ಭಾಷಾ ಬೆಳವಣಿಗೆ (Story based pedagogy) ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.<br>15. ಸರ್ಕಾರಿ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ಶಾಲೆಗಳನ್ನು ತೆರೆಯುವ ಮೂಲಕ ಶಾಲೆಗಳಲ್ಲಿ ಮಕ್ಕಳ ದಾಖಲಾತಿ, ಉಳಿಯುವಿಕೆಯನ್ನು ಮತ್ತು ಗುಣಾತ್ಮಕ ಶಿಕ್ಷಣವನ್ನು ನೀಡುವುದು ಹಾಗೂ ಶಾಲೆಯಿಂದ ಹೊರಗುಳಿಯುವ ಮತ್ತು ಶಾಲೆಗೆ ದಾಖಲಾಗದ ಮಕ್ಕಳ ಸಂಖ್ಯೆಯನ್ನು ಕಡಿಮೆ ಮಾಡುವುದು.<br>16. ಮಕ್ಕಳ ಕಲಿಕೆಯ ಗುಣ ಮಟ್ಟವನ್ನು ಹೆಚ್ಚಿಸಲು ಈ ಕೆಳಕಂಡ 10 ಅಂಶದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ:<br>i. ಚಟುವಟಿಕೆ (೧) - ಸೇತುಬಂಧ.<br>ii. ಚಟುವಟಿಕೆ(೨)- ಶಾಲಾ ಶೈಕ್ಷಣಿಕ ಯೋಜನೆ.<br>iii. ಚಟುವಟಿಕೆ (೩) – ಭಾಷಾ ಮಾಸಾಚರಣೆ.<br>iv. ಚಟುವಟಿಕೆ (೪) – ಸ್ಪಷ್ಟ ಓದು, ಶುದ್ಧ ಬರಹ, ಸರಳ ಗಣಿತ.<br>v. ಚಟುವಟಿಕೆ (೫) –ವಿಷಯ ವೇದಿಕೆ<br>vi. ಚಟುವಟಿಕೆ (೬) – ವಾರದ ವಿಜ್ಞಾನ ಪ್ರಯೋಗ.<br>vii. ಚಟುವಟಿಕೆ (೭)-ವಿಶೇಷ ಅವಧಿ ಹಾಗೂ ಸತತ ಪರಿಶ್ರಮ.<br>viii. ಚಟುವಟಿಕೆ (೮) – ಸಹೋದ್ಯೋಗಿಗಳ ಅವಲೋಕನ ಪಾಠ.<br>ix. ಚಟುವಟಿಕೆ (೯) ಪುಸ್ತಕದ ಪರಿಚಯ<br>x. ಚಟುವಟಿಕೆ (೧೦) ರಸಪ್ರಶ್ನೆ ಕಾರ್ಯಕ್ರಮ<br><br>17. 1ನೇ ತರಗತಿಗೆ ಹೊಸದಾಗಿ ದಾಖಲಾಗುವ ಮಕ್ಕಳಿಗೆ ಅನುಕೂಲವಾಗುವಂತೆ ವಿದ್ಯಾ |

| | | |
|---|---|---|
| | | ಪ್ರವೇಶ ಚಟುವಟಿಕೆಗಳ ಹಾಳೆಗಳನ್ನು "ಕಲಿ-ನಲಿ" ಪಠ್ಯ ಪುಸ್ತಕದಲ್ಲಿ (ಆಂಗ್ಲ, ಮರಾಠಿ, ತಮಿಳು, ತೆಲುಗು, ಮಾಧ್ಯಮ) ಅಳವಡಿಸಲು ಕ್ರಮ ವಹಿಸಲಾಗುತ್ತಿದೆ.<br>18. ಸೇತುಬಂಧ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅಗತ್ಯ ಮಾರ್ಗದರ್ಶನ ನೀಡಲಾಗುವುದು.<br>19. ಕಲಿಕಾ ಚೇತರಿಕೆ, ಕಲಿಕಾ ಬಲವರ್ಧನ ಉಪಕ್ರಮಗಳಡಿಯಲ್ಲಿ ಸಿದ್ಧಪಡಿಸಿರುವ ಚಟುವಟಿಕೆ ಪುಸ್ತಕಗಳು, ಕಲಿಕಾ ಫಲಾಧಾರಿತ ಪ್ರಶ್ನೆ ಕೋಠಿ, ಅಭ್ಯಾಸ ಪುಸ್ತಕಗಳ ನಿರಂತರ ಬಳಕೆಗೆ ಪೂರಕವಾಗಿದ್ದು, ಇವುಗಳ ಬಳಕೆಯ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡಲಾಗುವುದು.<br>20. 2025-26ನೇ ಸಾಲಿನಿಂದ TALP ಸೌಲಭ್ಯ ಹೊಂದಿರುವ 2000 ಶಾಲೆಗಳಲ್ಲಿ 4ನೇ ತರಗತಿಯಿಂದ 10ನೇ ತರಗತಿಗಳ ಅಂದಾಜು 2 ಲಕ್ಷ ವಿದ್ಯಾರ್ಥಿಗಳಿಗೆ "ಕಲಿಕಾದೀಪ" ಹಮ್ಮಿಕೊಳ್ಳಲಾಗುವುದು.<br>21. ಖಾನ್ ಅಕಾಡೆಮಿ ಸಹಯೋಗದೊಂದಿಗೆ ರಾಜ್ಯದ 6 ರಿಂದ 10ನೇ ತರಗತಿಯ ಸರ್ಕಾರಿ ಶಾಲೆಗಳಲ್ಲಿ "ಜ್ಞಾನ ಸೇತು" ಎಂಬ ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು.<br>22. ರಾಜ್ಯದ 6 ರಿಂದ 10ನೇ ತರಗತಿಗಳಿಗೆ ಗಣಿತ ಮತ್ತು ವಿಜ್ಞಾನ ಬೋಧನೆ ಮಾಡುತ್ತಿರುವ ಶಿಕ್ಷಕರಿಗೆ ಬೋಧನಾ ವಿಧಾನದಲ್ಲಿ ನಾವೀನ್ಯತೆ ಅಳವಡಿಸಿಕೊಳ್ಳಲು, ಕೃತಕ ಬುದ್ಧಿಮತ್ತೆ ಮತ್ತು ಶೈಕ್ಷಣಿಕ ತಂತ್ರಜ್ಞಾನದ ಕುರಿತು ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು.<br>23. ಕಂಪ್ಯೂಟರ್ ಸೌಲಭ್ಯವನ್ನು ಹೊಂದಿರುವ |

| | | |
|---|---|---|
| | | ರಾಜ್ಯದ 5000 ಸರ್ಕಾರಿ ಶಾಲೆಗಳಲ್ಲಿ 6 ರಿಂದ 10ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದಾರ್ಥಿಗಳಿಗೆ ಕೃತಕ ಬುದ್ಧಿ ಮತ್ತೆ ಮತ್ತು ತಂತ್ರಜ್ಞಾನದ ಬಳಕೆಯಿಂದ ಗಣಿತ ಮತ್ತು ವಿಜ್ಞಾನ ವಿಷಯಗಳನ್ನು ಪರಿಣಾಮಕಾರಿಯಾಗಿ ಕಲಿಯಲು ಅವಕಾಶ ಕಲ್ಪಿಸಲಾಗುವುದು. |
| ಇ) | ಶಿಕ್ಷಕರ ತರಬೇತಿಯನ್ನು ಹೆಚ್ಚಿಸುವುದು. ಬೋಧನಾ ಪರಿಕರಗಳ ಬಗ್ಗೆ ಕಾಲಕಾಲಕ್ಕೆ ಬದಲಾವಣೆ ತರುವಂತ ನಿಟ್ಟಿನಲ್ಲಿ ಅಗತ್ಯ ಮುಂಜಾಗ್ರತೆಗಳನ್ನು ಕೈಗೊಳ್ಳಲಾಗುವುದೆ? | ಹೌದು |

**ಇಪಿ 14 ಪಿಎಂಎ 2025**

**(ಎಸ್. ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು